RNU AIR DHARWAD

**NOVEMBER 30,2024**

**ALL INDIA RADIO- DHARWAD**

**PRADESH SAMACHARA (KANNADA) 12PM**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವವರು: ವಿವೇಕಾದಿತ್ಯ ಕನಿಯಾಲ

<><><>

'ಕಾನೂನು ಪಠ್ಯಗಳನ್ನಷ್ಟೇ ಅರ್ಥ ಮಾಡಿಕೊಂಡರೆ ಸಾಲದು, ಸಮಾಜದ ಸನ್ನಿವೇಶಗಳ ಹಿನ್ನೆಲೆಯಲ್ಲಿ, ಅರ್ಥ ಮಾಡಿಕೊಂಡು, ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು ಎಂದು, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಆಯೋಜಿಸಿದ್ದ, ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆರನೇ ಘಟಿಕೋತ್ಸವದಲ್ಲಿ, ಗೌರವ ಡಾಕ್ಟರೇಟ್ ಸ್ವೀಕರಿಸಿ, ದಿಕ್ಸೂಚಿ ಭಾಷಣ ಮಾಡಿದರು. ನ್ಯಾಯದ ಪರಿಪೇಕ್ಷೆಯಲ್ಲಿ, ಹೊಸ ದೃಷ್ಟಿಕೋನವನ್ನು ಯುವ ನ್ಯಾಯವಾದಿಗಳು ಸೃಷ್ಟಿಸಬೇಕು ಎಂದರು.

<><><>

ರಾಜ್ಯದಲ್ಲಿ ಹಿಂಗಾರು ಅತಿ ವೃಷ್ಟಿಯಿಂದ, 1 ಲಕ್ಷ 58 ಸಾವಿರದ 87 ಹೆಕ್ಟರ್ ಕೃಷಿ ಭೂಮಿಯಲ್ಲಿ, 120 ಕೋಟಿ ರೂಪಾಯಿ ಮೌಲ್ಯದ ಬೆಳೆ ಹಾನಿ ಅಂದಾಜಿಸಲಾಗಿದೆ. ಮುಂದಿನ ಒಂದು ವಾರದೊಳಗೆ, ಅರ್ಹ ರೈತರ ಖಾತೆಗಳಿಗೆ ಬೆಳೆ ನಷ್ಟ ಪರಿಹಾರದ ಹಣ ಜಮೆಯಾಗಲಿದೆ ಎಂದು, ಕಂದಾಯ ಖಾತೆ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಬೆಂಗಳೂರು ವಿಕಾಸಸೌಧದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ, ಸಚಿವರು ವಿಡಿಯೋ ಸಂವಾದ ನಡೆಸಿದರು. ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಹಿಂಗಾರು ಬೆಳೆ ಹಾನಿ ಸಂಬಂಧಿಸಿದಂತೆ ತಿಂಗಳಿಂದ ಜಂಟಿ ಸಮೀಕ್ಷೆ ನಡೆಸಲಾಗಿದೆ. ಬಗೈರ್ ಹುಕುಂ ಫಲಾನುಭವಿಗಳಿಗೆ ಡಿಜಿಟಲ್ ಸಾಗುವಳಿ ಪತ್ರ ನೀಡಲಾಗುವುದು ಎಂದರು.

<><><>

ಕೊಡಗು ಜಿಲ್ಲೆ ನಾಪೋಕ್ಲು ಸಮೀಪದ, ಪಾಡಿ ಇಗ್ಗುತ್ತಪ್ಪ ದೇವಾಲಯದ ಸಭಾಂಗಣದಲ್ಲಿ ನಡೆದ ಸಭೆ, ಸುಗ್ಗಿ ಹಬ್ಬ ಹುತ್ತರಿಯನ್ನು ಡಿಸೆಂಬರ್ 14 ರಂದು ಆಚರಿಸಲು, ನಿರ್ಧರಿಸಿದೆ. ದೇವಾಲಯದ ಪ್ರಮುಖರು ಹಾಗೂ ಭಕ್ತರ ಸಮ್ಮುಖದಲ್ಲಿ ಕಣಿಯರ ಶಶಿಕುಮಾರ್ ಸಲಹೆ ಮೇರೆಗೆ ದಿನ ನಿಗದಿಪಡಿಸಲಾಗಿದೆ. ದೇವಾಲಯದಲ್ಲಿ ಡಿಸೆಂಬರ್ 14 ರಂದು ರಾತ್ರಿ ನೆರೆ ಕಟ್ಟುವುದು, 8.30 ಕ್ಕೆ ಕದಿರು

ಕುಯ್ಯುವುದು, 9.30 ಕ್ಕೆ ಊಟೋಪಚಾರ ನಡೆಯಲಿದೆ. ಡಿಸೆಂಬರ್ 13 ರಂದು ಕಲ್ಯಾಷ್ಟ ಹಬ್ಬ ನಡೆಯಲಿದೆ.

<><><>

ಮಂಡ್ಯದಲ್ಲಿ ಆಯೋಜಿತ, 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ, ನಾಡೋಜ ಗೊ.ರು. ಚನ್ನಬಸಪ್ಪ ಅವರನ್ನು, ಕಲಬುರಗಿ ದೂರದರ್ಶನ ಕೇಂದ್ರದಲ್ಲಿ, ಸನ್ಮಾನಿಸಲಾಯಿತು. ಕಲಬುರಗಿ ದೂರದರ್ಶನ ಕೇಂದ್ರದಲ್ಲಿ ವಿಶೇಷ ಸಂದರ್ಶನ ನೀಡಿದ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಅಪ್ಪಾರಾವ್ ಅಕ್ಕೋಣೆ, ಪ್ರಸಾರ ನಿರ್ವಾಹಕ ಸಂಗಮೇಶ, ಸದಾನಂದ ಪೆರ್ಲ ಹಾಗೂ ಕೇಂದ್ರದ ಸಿಬ್ಬಂದಿ ಪಾಲ್ಗೊಂಡರು.

<><><>

ಹಿರಿಯ ಸಾಹಿತಿ ಜಿ.ರಾಮಕೃಷ್ಣ ಅವರದು, ಕೊರಳಿನ ಭಾಷೆ ಅಲ್ಲ; ಕರುಳಿನ ಭಾಷೆ ಎಂದು, ಹೊಸತು ಪತ್ರಿಕೆ ಸಂಪಾದಕ ಸಿದ್ಧನಗೌಡ ಪಾಟೀಲ, ಹೇಳಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, 'ಧರೆಗೆ ದೊಡ್ಡವರು' ಕಾರ್ಯಕ್ರಮದಲ್ಲಿ, ಅವರು, 'ಜಿ. ರಾಮಕೃಷ್ಣ' ಅವರ ಬದುಕು–ಬರೆಹ ಕುರಿತು ಮಾತನಾಡಿದರು. ಜಿ. ರಾಮಕೃಷ್ಣ ಅವರು, ವಿಶ್ವ ಜ್ಞಾನಕೋಶವಿದ್ದಂತೆ. ವಿದ್ಯಾನಿಧಿಯಾದ ಅವರೊಬ್ಬ, ವೈಜ್ಞಾನಿಕ ಚಿಂತನೆಯ ಹರಿಕಾರ ಎಂದು ಬೆಂಗಳೂರಿನ ಬರೆಹಗಾರ್ತಿ ಎನ್. ಗಾಯತ್ರಿ ನುಡಿದರು.

<><><>

ಚಿತ್ರಕಲೆ ಮನುಷ್ಯನ ಅಂತರಂಗದ ಚಲಿತ. ಶ್ರದ್ಧೆ ಮತ್ತು ಉತ್ಸುಕತೆ ಇದ್ದರೆ ಮಾತ್ರ ಚಿತ್ರಕಲೆ ಒಲಿಯುತ್ತದೆ ಎಂದು, ಪರಿಸರವಾದಿ ಸುರೇಶ ಹೆಬ್ಳೀಕರ ಹೇಳಿದ್ದಾರೆ. ಚಿತ್ರಕಲಾ ಶಿಲ್ಪಿ ಡಿ.ವಿ ಹಾಲಭಾವಿ ರಾಷ್ಟ್ರೀಯ ಟ್ರಸ್ಟ್ ವತಿಯಿಂದ, ಧಾರವಾಡದ ಅಲೂರು ವೆಂಕಟರಾವ್ ಭವನದಲ್ಲಿ ಆಯೋಜಿಸಿದ್ದ, ಡಿ.ವಿ ಹಾಲಭಾವಿ ರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಗೋಕಾಕದ ಸಿದ್ದಪ್ಪ ಸತ್ಯಪ್ಪ ಪಾಟೀಲ ಅವರಿಗೆ ಜೀವಮಾನ ಸಾಧನೆಯ ಕುಂಚ ಕಲಾ ತಪಸ್ವಿ ರಾಷ್ಟ್ರೀಯ ಪ್ರಶಸ್ತಿ, ಗದುಗಿನ ಕಮಲ್ ಅಹ್ಮದ್ ಎಂ. ಅವರಿಗೆ ಕುಂಚ ಕಲಾಶ್ರೀ ರಾಷ್ಟ್ರೀಯ ಪ್ರಶಸ್ತಿ, ಮಹಾರಾಷ್ಟ್ರದ ನಿಲೇಶ ಭಾರ್ತಿ ಹಾಗೂ ನಿಲಿಶಾ ಫಾಡ್ ಅವರಿಗೆ ಯುವ ಕುಂಚ ಕಲಾಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

<><><>

ವಿದ್ಯಾರ್ಥಿಗಳು ಪಠ್ಯದ ಜೊತೆಗೆ, ದಿನ ಪತ್ರಿಕೆಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಇದರಿಂದ ಬೌದ್ಧಿಕ ಮಟ್ಟ ಬೆಳೆಯುತ್ತದೆ ಎಂದು, ಧಾರವಾಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗರಾಜ ಅಂಗಡಿ ಹೇಳಿದರು. ಧಾರವಾಡ ತಾಲೂಕು ಕರಡಿಗುಡ್ಡ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು.

<><><>

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇಂದು ಸಂಜೆ 5 ಗಂಟೆಗೆ, ವಿಧಾನಸೌಧದ ಮುಂಭಾಗದಲ್ಲಿ, 'ನಮ್ಮ ಜಾತ್ರೆ' ಕಾರ್ಯಕ್ರಮ ಆಯೋಜಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜನಪದ ಕಲಾತಂಡಗಳ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

<><><>

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪುರಸ್ಕೃತ, ಹುನಗುಂದದ ಪ್ರಗತಿಪರ ರೈತ, ಮಲ್ಲಣ್ಣ ನಾಗರಾಳ ಇಂದು ಬೆಳಗ್ಗೆ ನಿಧನರಾದರು. 2006ರಲ್ಲಿ, ಖುಷ್ಕಿ ಬೇಸಾಯದಲ್ಲಿನ ಆವಿಷ್ಕಾರಗಳಿಗಾಗಿ, ಅಂದಿನ ರಾಜ್ಯಪಾಲ ಟಿ.ಎನ್.ಚತುರ್ವೇದಿ ಅವರಿಂದ, ಪುರಸ್ಕೃತರಾಗಿದ್ದರು. ಪಾರ್ಥಿವ ಶರೀರದ ಅಂತ್ಯಕ್ರಿಯೆ ಇಂದು ಸಂಜೆ, ನಾಲ್ಕು ಗಂಟೆಗೆ ಹುನಗುಂದದಲ್ಲಿ ನಡೆಯಲಿದೆ. ಗಣ್ಯರು ಸಂತಾಪ ಸೂಚಿಸಿದ್ದಾರೆ.

<><><>

ಕನ್ನಡದ ಭೀಷ್ಮ ಎಂದು ಖ್ಯಾತರಾಗಿದ್ದ, ಸಕ್ಕರಿ ಬಾಳಾಚಾರ್ಯ, 'ಶಾಂತಕವಿಗಳು', ಐವತ್ತು ವರ್ಷಗಳ ಕಾಲ ಕನ್ನಡ ಕಟ್ಟಲು, ಭಗೀರಥ ಪ್ರಯತ್ನ ಮಾಡಿದರು ಎಂದು, ವಿಶ್ರಾಂತ ಗ್ರಂಥಪಾಲ ಶಿವನಗೌಡ ಪಾಟೀಲ ಹೇಳಿದ್ದಾರೆ. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಶಾಂತಕವಿಗಳ ಹೆಸರಿನಲ್ಲಿ ನಡೆಸುತ್ತಿರುವ, ಶಾಂತೇಶ ವಾಚನಾಲಯದಲ್ಲಿ ಅಳವಡಿಸಿದ್ದ, 'ಶಾಂತಕವಿಗಳ' ಪರಿಚಯ ಫಲಕ ಅನಾವರಣಗೊಳಿಸಿ. ಅವರು ಮಾತನಾಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..